**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 232/2017
ಪಿಡಬ್ಲು : 7 ಸಿಡಬ್ಲು : 8

ಸಾಕ್ಷಿಯ ಹೆಸರು : ಗಣೇಶ ಪರಶುರಾಮ ಶೇರಖಾನೆ
ವಯಸ್ಸು : 47 ವರ್ಷ
ಉದ್ಯೋಗ : ವಾಣಿಜ್ಯ ತೆರಿಗೆ ನಿರೀಕ್ಷಕರು
ವಾಸ್ತವ್ಯ : ಹುಬ್ಬಳ್ಳಿ
ದಿನಾಂಕ : 10-01-2020 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ</u> : <u>ಸರ್ಕಾರಿ ಅಭಿಯೋಜಕರಿಂದ</u>**

ನಾನು ಹಿಂದೂ ಡೋರ ಪರಿಶಿಷ್ಟ ಜಾತಿಗೆ ಸೇರಿರುತ್ತೇನೆ . ಮೃತ ಪರಶುರಾಮ ನನ್ನ ತಂದೆ . ಚಾಸಾ-1 ನನ್ನ ತಮ್ಮ . ಆರೋಪಿತರು ಕುರುಬ ಜನಾಂಗದವರು ಇರುತ್ತಾರೆ . ನಮ್ಮ ಜಮೀನು ಮತ್ತು ಆರೋಪಿತರ ಜಮೀನು ಅಕ್ಕ-ಪಕ್ಕದಲ್ಲಿರುತ್ತವೆ .

ದಿನಾಂಕಃ 05-04-2017 ರಂದು ನಾನು ಹುಬ್ಬಳ್ಳಿಯಲ್ಲಿದ್ದಾಗ ಚಾಸಾ-1 ನನ್ನ ತಮ್ಮ ನನಗೆ ಫೋನ ಮಾಡಿ ನಾವು ಹೊಲಕ್ಕೆ ಕಲ್ಲು ತೆಗೆಸಲಿಕ್ಕೆ ಹೊರಟಿದ್ದೇವೆ , ನನ್ನ ಜೊತೆ ಅಳಿಯಂದರಾದ ಚಾಸಾ-6 ಮಲ್ಲಿಕಾರ್ಜುನ , ಚಾಸಾ-10 ಕಿರಣ , ಸ್ನೇಹಿತ ಚಾಸಾ-9 ಶಿವಾನಂದ ಎಲ್ಲರೂ ಸೇರಿ ಹೊರಟಿದ್ದೇವೆ ಎಂದು ಹೇಳಿದ .

ನಂತರ ಮದ್ಯಾಹ್ನ 2.00 ಗಂಟೆಗೆ ನನಗೆ ಫೋನ ಮಾಡಿ ಪಕ್ಕದ ಹೊಲದ ಮಾಲೀಕರಾದ ಆರೋಪಿ-1 ಇವರು ಕಲ್ಲಿನಿಂದ ನನ್ನ ತಂದೆಯ ತಲೆಯ ಎಡಭಾಗಕ್ಕೆ , ಕೆನ್ನೆಗೆ , ಭುಜಕ್ಕೆ ಹೊಡೆದಿದ್ದಾರೆ ಎಂದು ಹೇಳಿದ . ಆರೋಪಿ-2 ಈತನ ಕೈಯಲ್ಲಿ ಕೋಲು ಇದ್ದು ಅದರಿಂದ ನನ್ನ ತಂದೆಯ ಬಲಭುಜಕ್ಕೆ ಹೋಡೆದಿರುತ್ತಾನೆ , ಆರೋಪಿ-3 ಸಹ ಕೋಲಿನಿಂದ

ನನ್ನ ತಂದೆಯ ಎರಡೂ ಕೈಗಳಿಗೆ ಹೋಡೆದಿರುತ್ತಾನೆ ಎಂದು ಹೇಳಿರುತ್ತಾನೆ . ಆರೋಪಿ-1 ಕಲ್ಲು ತೆಗೆದುಕೊಂಡು ನನ್ನ ತಂದೆಯ ಬಾಯಿಗೆ ಹೊಡೆದಿದ್ದು ಬಾಯಿಂದ ರಕ್ತ ಬರುತ್ತಿತ್ತು ಎಂದು ಹೇಳಿದ . ನಂತರ ಆರೋಪಿತರು ಡೋರ ಸೂಳೆ ಮಕ್ಕಳೇ , ನಮ್ಮ ಪಕ್ಕದಲ್ಲಿರುವ ಹೊಲವನ್ನು ಕೀಳು ಜಾತಿಯವರು ತೆಗೆದುಕೊಂಡಿದ್ದೀರಿ ಎಂದು ನನ್ನ ತಂದೆಗೆ ಹೊಡೆದಿರುತ್ತಾರೆ ಎಂದು ನನಗೆ ಫೋನನಲ್ಲಿ ತಿಳಿಸಿರುತ್ತಾರೆ .

ವಿಷಯ ತಿಳಿದ ನಂತರ ಹುಬ್ಬಳ್ಳಿಯಿಂದ ಮುಧೋಳನ ನಾಯಕ ಆಸ್ಪತ್ರೆಗೆ ನನ್ನ ತಂದೆಯನ್ನು ಕರೆದುಕೊಂಡು ಹೋಗಿದ್ದು ಅಲ್ಲಿಗೆ ನಾನು ಹೋದೆ . ಏಕೆ ಹೀಗಾಯಿತು ಎಂದು ನಾನು ನನ್ನ ತಮ್ಮನನ್ನು ಕೇಳಿದಾಗ ನನ್ನ ತಮ್ಮ ಮೇಲೆ ಹೇಳಿದ ವಿಷಯವನ್ನು ಪುನಃ ನನಗೆ ತಿಳಿಸಿದ , ನನ್ನ ತಂದೆ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ , ಅವರು ಕೋಮಾ ಸ್ಥಿತಿಯಲ್ಲಿದ್ದರು . ನಾನು ನನ್ನ ತಂದೆಯನ್ನು ನೋಡಿದಾಗ ತಲೆಗೆ , ಕಾಲಿಗೆ , ಕೈಗೆ ಗಾಯವಾಗಿದ್ದನ್ನು ನೋಡಿರುತ್ತೇನೆ ಹಾಗೂ ಬಟ್ಟೆ ಎಲ್ಲ ರಕ್ತವಾಗಿತ್ತು .

ಮುಧೋಳ ಆಸ್ಪತ್ರೆಯಲ್ಲಿ 3 ದಿವಸ ದಾಖಲು ಮಾಡಿದ್ದು ನಂತರ ಅಲ್ಲಿನ ವೈದ್ಯರ ಸಲಹೆ ಮೇರೆಗೆ ಬೆಳಗಾವಿಯ lakeview ಆಸ್ಪತ್ರೆಗೆ 8 ನೇ ತಾರೀಕಿನ ದಿವಸ ಕರೆದುಕೊಂಡು ಬಂದಿರುತ್ತೇವೆ . ನಂತರ ನನ್ನ ತಂದೆ ಚಿಕೀತ್ಸೆ ಫಲಕಾರಿಯಾಗದೇ ದಿನಾಂಕಃ 22-04-2017 ರಂದು ಮರಣ ಹೊಂದಿದರು .

ನನ್ನ ತಂದೆಗೆ ತೀವ್ರವಾಗಿ ನೋವಾಗಿದ್ದರಿಂದ ತಕ್ಷಣ ಹೋಗಿ ದೂರು ಕೊಡಲಿಲ್ಲ ನನ್ನ ತಮ್ಮ 17 ನೇ ತಾರೀಕಿನ ದಿವಸ ದೂರು ಕೊಟ್ಟಿರುತ್ತಾನೆ . ಇದಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನ್ನ ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದಾರೆ .

**<u>ಪಾಟೀ ಸವಾಲು: ಶ್ರೀ. ಬಿ ಎಸ ಡಿ ವಕೀಲರಿಂದ ಆರೋಪಿತನ ಪರವಾಗಿ</u>**

ಆರೋಪಿ ಪರ ವಕೀಲರು ಈ ಕೇಸಿನ ಪ್ರತ್ಯಕ್ಷ ಸಾಕ್ಷಿದಾರರನ್ನು ಸಂಬಂಧಿಕ ಸಾಕ್ಷಿಗಳನ್ನು ಎಲ್ಲರನ್ನೂ ಒಂದೇ ದಿವಸ ಪಾಟೀ ಸವಾಲು ಮಾಡುವ ಬಗ್ಗೆ ದಂಡ ಪ್ರಕ್ರೀಯಾ ಸಂಹಿತೆ ಕಲಂ 323(2) ರ ಅಡಿಯಲ್ಲಿ ಸಲ್ಲಿಸಿದ್ದು ಅರ್ಜಿಯನ್ನು ದಿನಾಂಕಃ 27-09-2019 ರಂದು ಪುರಸ್ಕರಿಸಿದ್ದರಿಂದ ಪಾಟೀ ಸವಾಲಿಗೆ ಸಮಯ ನೀಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನ ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಎಂ ಹೆಚ ಅಣ್ಣಯ್ಯನವರ)
3 ನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು, ಬೆಳಗಾವಿ.